ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 7 ಎಂಆರ್ಆರ್ 2004

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 07.06.2004

## ಸುತ್ತೋಲೆ

ವಿಷಯ: ರಜೆಯ ಮೇಲೆ ಅಥವಾ ವರ್ಗಾವಣೆ ಮೇಲೆ ತೆರಳುವ ತಹಸೀಲ್ದಾರರನ್ನು ಭೂಮಿ ಬೆರಳು ಮುದ್ರೆಯನ್ನು ಹಸ್ತಾಂತರಿಸುವವರೆಗೆ ಬಿಡುಗಡೆ ಮಾಡದಿರುವ ಬಗ್ಗೆ.

ಭೂಮಿ ಕಾರ್ಯಾಚರಣೆಯಲ್ಲಿ ತಹಸೀಲ್ದಾರರ ಪಾತ್ರವು ತುಂಬಾ ಅವಶ್ಯಕವಾಗಿರುತ್ತದೆ. ತಾಲ್ಲೂಕು ಭೂಮಿ ಕೇಂದ್ರದಲ್ಲಿ ಕೆಲಸ ಮಾಡುತ್ತಿರುವ ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಿಗರುಗಳು ವರ್ಗಾವಣೆ ಮೇರೆಗೆ ತೆರಳಿದಾಗ ಅಥವಾ ಅವರುಗಳು ದೀರ್ಘಾವಧಿ ರಜೆ ಮೇಲೆ ತೆರಳಿದಾಗ ಬದಲಿ ಪ್ರಭಾರದ ಸಿಬ್ಬಂದಿಯ ಬೆರಳು ಮುದ್ರೆಯನ್ನು ತಹಸೀಲ್ದಾರರು ತಮ್ಮ ಬೆರಳು ಮುದ್ರೆಯನ್ನೊತ್ತಿ ಪ್ರಮಾಣೀಕರಿಸಬೇಕಾಗಿರುತ್ತದೆ. ಆದರೆ, ತಹಸೀಲ್ದಾರರುಗಳು ರಜೆಯ ಮೇಲೆ ತೆರಳಿದಾಗ ಅಥವಾ ವರ್ಗಾವಣೆ ಮೇರೆಗೆ ತೆರಳುವಾಗ ಅವರು, ಭೂಮಿ ಕೇಂದ್ರದಲ್ಲಿ ಪೂರ್ಣಗೊಳಿಸಬೇಕಾಗಿರುವ ಪ್ರಮುಖ ಕೆಲಸಗಳನ್ನು ನಿರ್ವಹಿಸದಿದ್ದಾಗ್ಯೂ ಸಹ ತಮ್ಮ ಕಾರ್ಯಾಲಯದಿಂದ ವರ್ಗಾವಣೆಗೊಂಡ ತಹಸೀಲ್ದಾರರನ್ನು ನೌಕರರನ್ನು ಬಿಡುಗಡೆ ಮಾಡುತ್ತಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆ. ಈ ಪದ್ಧತಿಯಿಂದ ಭೂಮಿ ಯೋಜನೆಗೆ ಪ್ರತಿಕೂಲ ಪರಿಣಾಮವುಂಟಾಗುತ್ತಿದೆ. ಕೆಲವೊಮ್ಮೆ ಮ್ಯುಟೇಶನ್ನುಗಳ ವಿಲೇವಾರಿಯಲ್ಲಿ ವಿಪರೀತ ವಿಳಂಬವಾಗುತ್ತಿರುವುದನ್ನೂ ಗಮನಿಸಲಾಗಿದೆ. ಆದುದರಿಂದ ಭೂಮಿ ಯೋಜನೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಯಾವುದೇ ಅಧಿಕಾರಿಗಳು ಅಥವಾ ನೌಕರರು ವರ್ಗಾವಣೆ ಹೊಂದಿದಾಗ ಅಥವಾ ದೀಘಾವಧಿ ರಜೆ ಮೇಲೆ ತೆರಳಿದಾಗ ಅವರುಗಳು ಭೂಮಿ ಕೇಂದ್ರದಲ್ಲಿ ತಮ್ಮ ಬೆರಳು ಮುದ್ರೆಯನ್ನು ತಮ್ಮ ಮುಂದಿನ ಅಧಿಕಾರಿಗೆ/ನೌಕರರಿಗೆ ಹಸ್ತಾಂತರಿಸಿದ ಹೊರತು ಅವರನ್ನು ಬಿಡುಗಡೆಗೊಳಿಸುವಂತಿಲ್ಲ. ಈ ಸೂಚನೆಯನ್ನು ಕಟ್ಟುನಿಟ್ಟಾಗಿ ಕಪಾಲಿಸತಕ್ಕದ್ದು.

ಈ ಸುತ್ತೋಲೆಯು ಕಂದಾಯ ಇಲಾಖೆಯ ಇಂಟರ್‌ನೆಟ್ ಸೈಟ್ http://www.bhoomi.kar.nic.in ನಲ್ಲೂ ಲಭ್ಯವಿದೆ.

(ರಾಜೀವ್ ಚಾವ್ಲಾ)
ವಿಶೇಷ ಕಾರ್ಯದರ್ಶಿ (ಭೂಮಿ)
ಕಂದಾಯ ಇಲಾಖೆ

ಎಲ್ಲಾ ಜಿಲ್ಲಾಧಿಕಾರಿಗಳು

ಜಿಲ್ಲಾಧಿಕಾರಿಗಳವರ ಕಛೇರಿ
ಹಾಸನ ಜಿಲ್ಲೆ, ಹಾಸನ.

ಜಿಲ್ಲಾಧಿಕಾರಿಗಳ ಪರವಾಗಿ
ಹಾಸನ ಜಿಲ್ಲೆ, ಹಾಸನ.